AUGUST 26, 2026

# AKASHAVANI - DHARWAD

# PRADESH SAMACHARA (KANNADA) 07.05 A.M.

<><>

**ಮುಖಾಂಶಗಳು:**

- **SIR ಕುರಿತು ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಕಳವಳ; ಮುಖ್ಯ ಚುನಾವಣಾ ಆಯುಕ್ತರಿಗೆ ಪತ್ರ.**

- **ಕೌಶಲ್ಯವಂತರಾದ, ಜಾಗತಿಕವಾಗಿ ಮುನ್ನಡೆಸಲು ಸಿದ್ಧವಾಗಿರುವ ಕರ್ನಾಟಕ ನಿರ್ಮಾಣಕ್ಕೆ ಎಲ್ಲರೂ ಒಟ್ಟಾಗಿ ಕೈಜೋಡಿಸೋಣ : ಸಚಿವ ಡಾ ಅಜಯ್ ಸಿಂಗ್**
- **ರಾಜ್ಯ ಸರ್ಕಾರದ ಆಡಳಿತ ವೈಫಲ್ಯ ವಿರೋಧಿಸಿ, ಸೆಪ್ಟೆಂಬರ್ 1ರಿಂದ 10ರ ವರೆಗೆ ಬಿಜೆಪಿ ವತಿಯಿಂದ ಪಾದಯಾತ್ರೆ.**
- **ಇಂದು ಮುಸ್ಲಿಂ ಬಾಂಧವರಿಂದ ಈದ್ ಎ ಮಿಲಾದ್ ಉನ್ ನಬಿ ಆಚರಣೆ; ರಾಷ್ಟ್ರಪತಿಯವರಿಂದ ಶುಭಾಶಯ.**

**ವಾರ್ತೆಗಳ ವಿವರ.**

**ಕರ್ನಾಟಕದ ಮತದಾರರ ಪಟ್ಟಿಯ ವಿಶೇ ’ ತೀವ್ರ ಪರಿ ್ಕರಣೆ – SIR ಕುರಿತು** ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರು ಭಾರತದ ಮುಖ್ಯ ಚುನಾವಣಾ ಆಯುಕ್ತರಾದ ಜ್ಞಾನೇಶ್ ಕುಮಾರ್ ಅವರಿಗೆ ಪತ್ರ ಬರೆದಿದ್ದಾರೆ. SIR ಕುರಿತಂತೆ ಗಂಭೀರ ಕಳವಳ ವ್ಯಕ್ತಪಡಿಸಿದ್ದು, ASDDO ಅಡಿಯಲ್ಲಿ ಗುರುತಿಸಲಾದ 1.08 ಕೋಟಿಗೂ ಹೆಚ್ಚು ಮತದಾರರು ಮತ್ತು ಸುಮಾರು 43 ಲಕ್ಷ ಮತದಾರರು ತಾರ್ಕಿಕ ವ್ಯತ್ಯಾಸಗಳಿಗಾಗಿ ನೋಟಿಸ್‌ಗಳನ್ನು ಎದುರಿಸುತ್ತಿದ್ದಾರೆ. ಹಕ್ಕುಗಳು ಮತ್ತು ಆಕ್ಷೇಪಣೆಗಳ ಸಲ್ಲಿಸುವಿಕೆ ಅವಧಿಯನ್ನು ವಿಸ್ತರಿಸಬೇಕು, ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ ಸಭೆಗಳು ಮತ್ತು ನಗರ ಪ್ರದೇಶಗಳಲ್ಲಿ ವಾರ್ಡ್ ಸಮಿತಿ ಸಭೆಗಳು ಸೇರಿದಂತೆ ನಿಗದಿತ ಕಾರ್ಯವಿಧಾನವನ್ನು ಸಾಕ ್ಟ ಪ್ರಚಾರದೊಂದಿಗೆ ಸಂಪೂರ್ಣವಾಗಿ ಕಾರ್ಯಗತಗೊಳಿಸಲು ಮುಖ್ಯ ಚುನಾವಣಾಧಿಕಾರಿಗಳಿಗೆ ನಿರ್ದೇಶಿಸಬೇಕು ಎಂದು ಪತ್ರದಲ್ಲಿ ಹೇಳಿದ್ದಾರೆ.

<><><>

**ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿ ವಿಶೇ** ’ ಸಮಗ್ರ ಪರಿ ್ಕರಣೆ ಕಾರ್ಯ ನೆಡೆದಿದ್ದು, ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿದೆ ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಸಪ್ಟೆಂಬರ್ 23 ರವರೆಗೆ ಅವಕಾಶವಿದ್ದು, ಅರ್ಹರು ಮತದಾರರ ಪಟ್ಟಿಯಿಂದ ಹೊರಗುಳಿಯದಂತೆ ನೋಡಿಕೊಳ್ಳುವಂತೆ ಹಾಸನ ಜಿಲ್ಲಾಧಿಕಾರಿ ಕೆ ಎಸ್ ಲತಾಕುಮಾರಿ ಅವರು ತಿಳಿಸಿದ್ದಾರೆ. ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಕರಡು ಮತದಾರರ ಪಟ್ಟಿಯನ್ನು ಹಸ್ತಾಂತರಿಸಿ ಮಾತನಾಡಿದ ಅವರು; ಇಂದಿನಿಂದ ಅಕ್ಟೋಬರ್ 22ರ ವರೆಗೂ ನೋಟಿಸ್ ಅವಧಿ ಹಾಗೂ ವಿಲೇವಾರಿ ಪ್ರಕ್ರಿಯೆ ಇರುತ್ತದೆ ಎಂದು ತಿಳಿಸಿದರಲ್ಲದೆ, ಅಕ್ಟೋಬರ್ 27 ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಣೆ ಮಾಡಲಾಗುತ್ತದೆ ಎಂದರು. 18 ವ ೯ ಮೇಲ್ಪಟ್ಟ ಪ್ರತಿಯೊಬ್ಬರೂ ಸಹ ಅರ್ಜಿ ನಮೂನೆ 6 ರೊಂದಿಗೆ ಅಗ್ಯತ ದಾಖಲೆಗಳನ್ನು ನೀಡಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿರುತ್ತದೆ. ಅದೇ ರೀತಿ ದಿನಾಂಕ 01–10–2026 ಕ್ಕೆ 18 ವ ೯ ತುಂಬುವವರು ಕೂಡ ಅರ್ಜಿ ನಮೂನೆ 6 ಸಲ್ಲಿಸಬಹುದಾಗಿದೆ ಎಂದು ಹೇಳಿದರು.

<><><>

**ಯುವಜನರ ಭವಿ  ್ಯವನ್ನು ಕಾಪಾಡುವ ಮತ್ತು ಮಾದಕ ವಸ್ತುಗಳ ಅಕ್ರಮ ಜಾಲಕ್ಕೆ** ಕಡಿವಾಣ ಹಾಕುವ ನಿಟ್ಟಿನಲ್ಲಿ ಕಳೆದ 10 ದಿನಗಳಲ್ಲಿ 15 ಕೋಟಿ 94 ಲಕ್ಷ ಮಾರುಕಟ್ಟೆ ಮೌಲ್ಯದ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಗೃಹ ಖಾತೆ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ಎಕ್ಸ್ ಖಾತೆಯಲ್ಲಿ ಈ ವಿಷಯ ತಿಳಿಸಿರುವ ಅವರು; ಈ ಕಾರ್ಯಾಚರಣೆಯಲ್ಲಿ 7 ಕೆಜಿ ಎಂಡಿಎಂಎ, 21 ಕೆಜಿ ಗಾಂಜಾ ಸೇರಿದಂತೆ 10 ಜನರನ್ನು ಬಂಧಿಸಲಾಗಿದೆ. ಮಾದಕ ವಸ್ತುಗಳ ಸಾಗಣೆ, ಮಾರಾಟ ಮತ್ತು ಬಳಕೆಯ ವಿರುದ್ಧ ಶೂನ್ಯ ಸಹಿ  ್ಣುತೆ ನೀತಿಯೊಂದಿಗೆ ನಮ್ಮ ಸರ್ಕಾರ ಕಾರ್ಯನಿರ್ವಹಿಸುತ್ತಿದೆ ಎಂದಿದ್ದಾರೆ. ಮಾದಕ ವಸ್ತುಗಳ ಅಕ್ರಮ ಸಾಗಾಟ ಮತ್ತು ಮಾರಾಟಕ್ಕೆ ಕಡಿವಾಣ ಹಾಕುವ ಮೂಲಕ ಯುವ ಸಮುದಾಯವನ್ನು ರಕ್ಷಿಸುವುದು ಹಾಗೂ ಮಾದಕರಹಿತ ಸಮಾಜ ನಿರ್ಮಿಸುವುದು ನಮ್ಮ ಸಂಕಲ್ಪವಾಗಿದೆ ಎಂದೂ ಅವರು ಹೇಳಿದ್ದಾರೆ.

<><><>

**ಪ್ರತಿಭೆ ವಿಶ್ವವ್ಯಾಪಿಯಾಗಿದ್ದರೂ ಅವಕಾಶಗಳು ಎಲ್ಲರಿಗೂ ಸಮಾನವಾಗಿ** ಲಭ್ಯವಾಗುತ್ತಿಲ್ಲ. ಈ ಅಂತರವನ್ನು ಉತ್ತಮ ನೀತಿಗಳು ಮತ್ತು ಪರಿಣಾಮಕಾರಿ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳ ಮೂಲಕ ತುಂಬುವ ಅಗತ್ಯವಿದೆ ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಡಾ. ಅಜಯ್ ಸಿಂಗ್ ಹೇಳಿದ್ದಾರೆ. ಬೆಂಗಳೂರು, ಸುಮಾರು 67 ಸಾವಿರ ನೋಂದಾಯಿತ ಐಟಿ ಮತ್ತು ಟೆಕ್ ಕಂಪನಿಗಳ ತವರೂರಾಗಿದೆ. ನಗರದ ಐಟಿ ಮತ್ತು ತಂತ್ರಜ್ಞಾನ ವಲಯವು ನೇರ ಹಾಗೂ ಪರೋಕ್ಷವಾಗಿ ಸುಮಾರು 10 ಲಕ್ಷದಿಂದ 25 ಲಕ್ಷ ಜನರಿಗೆ ಉದ್ಯೋಗಾವಕಾಶಗಳನ್ನು ಒದಗಿಸುತ್ತಿದೆ. ಈ ಬಲವನ್ನು ರಾಜ್ಯದ ಕೌಶಲ್ಯಾಭಿವೃದ್ಧಿ ಮತ್ತು ಶಿಕ್ಷಣ ವ್ಯವಸ್ಥೆಯೊಂದಿಗೆ ಮತ್ತ  ್ಟ ಪರಿಣಾಮಕಾರಿಯಾಗಿ ಜೋಡಿಸುವ ಅಗತ್ಯವಿದೆ ಎಂದು ಹೇಳಿದರು. ಕರ್ನಾಟಕದ ಶಿಕ್ಷಣ ಸಂಸ್ಥೆಗಳು ಕೇವಲ ಉದಯೋನ್ಮುಖ ತಂತ್ರಜ್ಞಾನಗಳನ್ನು ಬೋಧಿಸುವ ಕೇಂದ್ರಗಳಾಗಿರದೆ, ಅವುಗಳ ಪರೀಕ್ಷಾ ಶಿಬಿರಗಳಾಗಬೇಕು. ವಿದ್ಯಾರ್ಥಿಗಳು ಎಂಎಸ್‌ಎಂಇಗಳು, ರೈತರು, ಸಾರ್ವಜನಿಕ ಸೇವೆಗಳು ಮತ್ತು ಸ್ಥಳೀಯ ಸಮುದಾಯಗಳು ಎದುರಿಸುತ್ತಿರುವ ನೈಜ ಸಮಸ್ಯೆಗಳ ಪರಿಹಾರಕ್ಕಾಗಿ ತಂತ್ರಜ್ಞಾನವನ್ನು ಬಳಸುವಂತಾಗಬೇಕು ಎಂದು ಆಶಯ ವ್ಯಕ್ತಪಡಿಸಿದರು.

<><><>

**‘ವಿಧಾನ ಪರಿ  ್ತಿನ ಸಭಾಪತಿಯಾಗಿ ಇದು ತಮ್ಮ ಮೊದಲ ಅಧಿವೇಶನವಾಗಿದ್ದು,** ಸದನವನ್ನು ಸಂಪೂರ್ಣ ನಿ  ್ಷಪಾತ ಹಾಗೂ ಸಂವಿಧಾನಬದ್ಧವಾಗಿ ನಡೆಸಿದ ಆತ್ಮತೃಪ್ತಿಯಿದೆ. ಆದರೆ, ಚಿಂತಕರ ಚಾವಡಿ ಎನಿಸಿದ ಮೇಲ್ಮನೆಯಲ್ಲಿ ಜನಹಿತಕ್ಕಾಗಿ ಅರ್ಥಪೂರ್ಣ ಚರ್ಚೆ ನಡೆಯಲು ಪ್ರತಿಪಕ್ಷಗಳ ಸದಸ್ಯರು ಸೂಕ್ತ ಸಹಕಾರ ನೀಡಲಿಲ್ಲ,’ ಎಂದು ವಿಧಾನ ಪರಿ  ್ತ್ ಸಭಾಪತಿ ಸಲೀಂ ಅಹ್ಮದ್ ಅವರು ತಿಳಿಸಿದ್ದಾರೆ. ವಿಧಾನ ಪರಿ  ್ತಿನ ಅಧಿವೇಶನದ ಕುರಿತಾಗಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಬರ ಪರಿಸ್ಥಿತಿ, ಕುಡಿಯುವ ನೀರು, ರೈತರ ಮತ್ತು ನೀರಾವರಿ ಸಮಸ್ಯೆಗಳ ಕುರಿತು ಚರ್ಚಿಸಲು ಪ್ರತಿಪಕ್ಷಗಳಿಗೆ ಮುಕ್ತ ಅವಕಾಶ ನೀಡಲಾಗಿತ್ತು. ಪ್ರತಿಭಟನೆ ಮಾಡುವುದು ಪ್ರತಿಪಕ್ಷದ ಹಕ್ಕಾಗಿದ್ದರೂ, ಕಲಾಪವೇ ನಡೆಯದಂತೆ ಮಾಡುವುದು ಸಂಸದೀಯ ವ್ಯವಸ್ಥೆಗೆ ಸೂಕ್ತವಲ್ಲ. ಸಭಾಪತಿ ಪೀಠಕ್ಕೆ ಹಾಗೂ ಸಂವಿಧಾನದ ಘನತೆಗೆ ಚ್ಯುತಿ ತರುವಂತ ಅಸಂಸದೀಯ ಭಾ  ಾ ಪ್ರಯೋಗವನ್ನು ಸಹಿಸುವುದಿಲ್ಲ. ಆಡಳಿತ ಪಕ್ಷದ ಸಚಿವರು ಮತ್ತು ಸದಸ್ಯರು ಸಹ ಸದನದಲ್ಲಿ ಕಡ್ಡಾಯವಾಗಿ ಹಾಜರಿದ್ದು ಸಹಕರಿಸಬೇಕು ಎಂದು ಸಭಾಪತಿಯವರು ತಿಳಿಸಿದರು.

<><><>

**ಈಗ ಪ್ರಕಟಣೆ ಬಳಿಕ ಪ್ರದೇಶ ಸಮಾಚಾರ ಮುಂದುವರಿಯುವುದು**

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ**

<><><>

**ರಾಜ್ಯ ಸರ್ಕಾರದ ಆಡಳಿತ ವೈಫಲ್ಯ ವಿರೋಧಿಸಿ, ಸೆಪ್ಟೆಂಬರ್ 1ರಿಂದ 10ರ ವರೆಗೆ** ಬಿಜೆಪಿ ವತಿಯಿಂದ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು, ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಈ ವಿಷಯ ತಿಳಿಸಿರುವ ಅವರು; ಸೆಪ್ಟೆಂಬರ್ 1ರಂದು ರಾಯಚೂರಿನಿಂದ ಬಳ್ಳಾರಿಯವರೆಗೆ ನಡೆಯುವ ಪಾದಯಾತ್ರೆಯನ್ನು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಉದ್ಘಾಟಿಸಲಿದ್ದು, ಪಕ್ಷದ ಹಲವು ನಾಯಕರು ಪಾಲ್ಗೊಳ್ಳಲಿದ್ದಾರೆ. ಸೆಪ್ಟೆಂಬರ್ 10ರಂದು ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸೇರಿದಂತೆ, ಕೇಂದ್ರದ ಹಲವು ಸಚಿವರು, ಮುಖಂಡರು ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು. ರಾಯಚೂರಿನಿಂದ ಬಳ್ಳಾರಿಯವರೆಗೆ ನಡೆಯಲಿರುವ ಪಾದಯಾತ್ರೆಯಲ್ಲಿ, ರಾಜ್ಯ ಸರ್ಕಾರದ ವಿವಿಧ ವೈಫಲ್ಯಗಳನ್ನು ಜನರಿಗೆ ಮನವರಿಕೆ ಮಾಡಿಕೊಡಲಾಗುವುದು. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ನೇತೃತ್ವದ ಸರ್ಕಾರ, ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳನ್ನು, ಜನರಿಗೆ ತಲುಪಿಸುವಲ್ಲಿ ವಿಫಲವಾಗಿದೆ. ಉದ್ಯೋಗ ನೇಮಕಾತಿ ಕುಂಠಿತವಾಗಿದೆ. ಉತ್ತರ ಕರ್ನಾಟಕ ಸೇರಿದಂತೆ, ರಾಜ್ಯದಲ್ಲಿ ಆವರಿಸಿರುವ ಬರದ ಸಮಸ್ಯೆ ಸೇರಿದಂತೆ, ವಿವಿಧ ವಿಷಯಗಳ ಕುರಿತು ಜನರಿಗೆ ಮನವರಿಕೆ ಮಾಡಲಾಗುವುದು ಎಂದರು.

<><><>

**ಇಂದು, ಈದ್–ಎ–ಮಿಲಾದ್–ಉನ್–ನಬಿ. ಇಸ್ಲಾಂ ಧರ್ಮದ ಕೊನೆಯ ಪ್ರವಾದಿ** ಮುಹಮ್ಮದ್ ಅವರ ಜನ್ಮದಿನದ ಪವಿತ್ರ ಹಬ್ಬವಾಗಿದೆ. ಇದನ್ನು ಇಸ್ಲಾಮಿಕ್ ಕ್ಯಾಲೆಂಡರ್‌ನ ಮೂರನೇ ತಿಂಗಳಾದ ರಬಿ–ಉಲ್–ಅವ್ವಲ್‌ನಲ್ಲಿ ಆಚರಿಸಲಾಗುತ್ತದೆ. ಈ ದಿನ, ಪ್ರವಾದಿಯವರ ಬೋಧನೆಗಳನ್ನು ಸ್ಮರಿಸಲಾಗುತ್ತದೆ. ಮುಸ್ಲಿಂ ಬಾಂಧವರು, ಶಾಂತಿ ಮತ್ತು ಸೌಹಾರ್ದತೆಯ ಸಂದೇಶ ಸಾರಿ ಭವ್ಯ ಮೆರವಣಿಗೆಗಳನ್ನು ನಡೆಸುತ್ತಾರೆ. ಬಡವರಿಗೆ ಅನ್ನದಾನ ಹಾಗೂ ದಾನ ಮಾಡುವುದರಲ್ಲಿ ಈ ದಿನ ವಿಶೇ ್ಷ ಪ್ರಾಮುಖ್ಯವಿದೆ. ಹಲವೆಡೆ 'ಮಿಲಾದ್ ಮೆಫ್ಫಿಲ್ಸ್' ಮತ್ತು 'ಸೀರತ್ ಸಮ್ಮೇಳನಗಳು' ಆಯೋಜಿತವಾಗಿವೆ. ಅಲ್ಲಿ ಉಲೇಮಾಗಳು ಅಥವಾ ಧಾರ್ಮಿಕ ವಿದ್ವಾಂಸರು ಪ್ರವಾದಿಯವರ ಜೀವನ ಮತ್ತು ಬೋಧನೆಗಳನ್ನು ಪ್ರಚುರ ಪಡಿಸುವರು.

<><><>

**ರಾ ್ಷ್ಟಪತಿ ದ್ರೌಪದಿ ಮುರ್ಮು ಅವರು ಈದ್–ಎ–ಮಿಲಾದ್–ಉನ್–ನಬಿ ಹಬ್ಬದ** ಶುಭಾಶಯ ಕೋರಿದ್ದಾರೆ. ತಮ್ಮ ಸಂದೇಶದಲ್ಲಿ, ಪ್ರವಾದಿ ಮುಹಮ್ಮದ್ ಅವರ ಬೋಧನೆಗಳನ್ನು ಸ್ಮರಿಸುವ ಸಂದರ್ಭವಾಗಿದ್ದು, ಪ್ರವಾದಿಯವರ ಬೋಧನೆಗಳು, ನಡವಳಿಕೆ ಮತ್ತು ಕರ್ತವ್ಯನಿ ್ಠೆಯ ಮಾರ್ಗವನ್ನು ಅನುಸರಿಸಲು ನಾಗರಿಕರಿಗೆ ಸ್ಫೂರ್ತಿ ನೀಡುತ್ತವೆ ಎಂದು ಹೇಳಿದ್ದಾರೆ.

<><><>

**"ಕಣ್ಣುಗಳನ್ನು ದಾನ ಮಾಡಿ, ದೃಷ್ಟಿಯನ್ನು ಉಡುಗೊರೆಯಾಗಿಸಿ, ಜೀವನ** ಪರಿವರ್ತಿಸಿ" ಎಂಬ ಧ್ಯೇಯದೊಂದಿಗೆ, ವಿಶ್ವ ನೇತ್ರದಾನ ಪಾಕ್ಷಿಕವನ್ನು ಆಚರಿಸಲಾಗುತ್ತಿದೆ. ಖ್ಯಾತ ನಟ, ದಿವಂಗತ ಪುನೀತ ರಾಜಕುಮಾರ ಆಶಯದಂತೆ, ಬದುಕಿದ್ದಾಗಲೇ, ಕಣ್ಣು, ಅಂಗಾಂಗ ಮತ್ತು ದೇಹ ದಾನಕ್ಕೆ ವಾಗ್ದಾನ ಮಾಡುವಂತೆ, ರಾಜ್ಯಾದ್ಯಂತ, ಜನ ಜಾಗೃತಿ ಮೂಡಿಸಲಾಗುತ್ತಿದೆ. ಈ ಕುರಿತು ಹುಬ್ಬಳ್ಳಿಯ ನೇತ್ರತಜ್ಞ ವೈದ್ಯ ಡಾ. ಸತೀಶ ಹಳ್ಳಿಕೇರಿ ಆಕಾಶವಾಣಿಗೆ ಮಾಹಿತಿ ನೀಡಿದ್ದಾರೆ;

**ಧ್ವನಿ: ಡಾ. ಸತೀಶ ಹಳ್ಳಿಕೇರಿ 46 ಸೆ.**

<><><>

**ಸಿಎಸ್ಐಆರ್–ರಾಷ್ಟ್ರೀಯ ಏರೋಸ್ಪೇಸ್ ಪ್ರಯೋಗಾಲಯ; ಸುಧಾರಿತ ಬಾಹ್ಯಾಕಾಶ** ಉಡ್ಡಯನ ಕ್ಷೇತ್ರದ ಮಹತ್ವದ ಹೆಜ್ಜೆಯಾಗಿ, ಭಾರತದ ಮಾನವರಹಿತ ರಕ್ಷಣಾ ಸಾಮರ್ಥ್ಯಗಳನ್ನು ಹೆಚ್ಚಿಸುವಂತಹ ಸ್ಥಳೀಯ ಸೂಕ್ಷ್ಮ ಮತ್ತು ಸಣ್ಣ ಅನಿಲ ಟರ್ಬೈನ್

ಎಂಜಿನ್‌ಗಳನ್ನು ನವದೆಹಲಿಯ ಸಿಎಸ್ಐಆರ್ ಪ್ರಧಾನ ಕಚೇರಿಯ ಎಸ್ಎಸ್‌ಬಿ ಸಭಾಂಗಣದಲ್ಲಿ ಯಶಸ್ವಿಯಾಗಿ ಅನಾವರಣಗೊಳಿಸಿದೆ. ಭಾರತದ ಬಾಹ್ಯಾಕಾಶ ಮತ್ತು ರಕ್ಷಣಾ ತಂತ್ರಜ್ಞಾನ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ ಅತ್ಯಾಧುನಿಕ ಹಾಗೂ ಸಂಪೂರ್ಣ ಸ್ವದೇಶಿ ನಿರ್ಮಿತ ಮೂರು ಮೈಕ್ರೋ ಮತ್ತು ಸ್ಮಾಲ್ ಗ್ಯಾಸ್ ಟರ್ಬೈನ್ ಇಂಜಿನ್‌ಗಳು ಮಹತ್ವಪಡೆದಿವೆ. ಸ್ಥಳೀಯ ರಕ್ಷಣಾ ತಂತ್ರಜ್ಞಾನಗಳಲ್ಲಿನ ಅವಶ್ಯಕತೆಗಳನ್ನು ಪೂರೈಸಲು ಅಭಿವೃದ್ಧಿಪಡಿಸಲಾದ ಈ ಕಾಂಪ್ಯಾಕ್ಟ್ ಪ್ರೊಪಲ್ಷನ್ ವ್ಯವಸ್ಥೆಗಳನ್ನು, ಯುದ್ಧತಂತ್ರದ ಮಾನವರಹಿತ ವೈಮಾನಿಕ ವಾಹನಗಳು, ಡ್ರೋನ್ ಪ್ರತಿಬಂಧಕಗಳು ಮತ್ತು ಚಿಕ್ಕ ಕ್ಷಿಪಣಿ ವ್ಯವಸ್ಥೆಗಳು ಸೇರಿದಂತೆ ಅನ್ವಯಿಕೆಗಳಿಗಾಗಿ ಕಲ್ಪಿಸಲಾಗಿದೆ. ಈ ಕಾರ್ಯಕ್ರಮವು ಭಾರತದ ರಕ್ಷಣಾ ಮತ್ತು ವೈಜ್ಞಾನಿಕ ಸಮುದಾಯಗಳ ಹಿರಿಯ ನಾಯಕತ್ವವನ್ನು ಒಗ್ಗೂಡಿಸಿದಂತಾಗಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

- **SIR ಕುರಿತು ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಕಳವಳ; ಮುಖ್ಯ ಚುನಾವಣಾ ಆಯುಕ್ತರಿಗೆ ಪತ್ರ.**

- **ಕೌಶಲ್ಯವಂತರಾದ, ಜಾಗತಿಕವಾಗಿ ಮುನ್ನಡೆಸಲು ಸಿದ್ಧವಾಗಿರುವ ಕರ್ನಾಟಕ ನಿರ್ಮಾಣಕ್ಕೆ ಎಲ್ಲರೂ ಒಟ್ಟಾಗಿ ಕೈಜೋಡಿಸೋಣ : ಸಚಿವ ಡಾ ಅಜಯ್ ಸಿಂಗ್**

- **ರಾಜ್ಯ ಸರ್ಕಾರದ ಆಡಳಿತ ವೈಫಲ್ಯ ವಿರೋಧಿಸಿ, ಸೆಪ್ಟೆಂಬರ್ 1ರಿಂದ 10ರ ವರೆಗೆ ಬಿಜೆಪಿ ವತಿಯಿಂದ ಪಾದಯಾತ್ರೆ.**

- **ಇಂದು ಮುಸ್ಲಿಂ ಬಾಂಧವರಿಂದ ಈದ್ ಎ ಮಿಲಾದ್ ಉನ್ ನಬಿ ಆಚರಣೆ; ರಾಷ್ಟ್ರಪತಿಯವರಿಂದ ಶುಭಾಶಯ.**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು. ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 7 ಗಂಟೆ 35 ನಿಮಿಷಕ್ಕೆ**

<><><><><><><><>